# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರ ಕಛೇರಿ, ಹಂಪಿನಗರ ವಾರ್ಡ್ ಸಂಖ್ಯೆ-159,
ಸಂಕಷ್ಟಹರ ಗಣಪತಿ ದೇವಸ್ಥಾನ ಪಾರ್ಕ್ ಹತ್ತಿರ, ಆರ್.ಪಿ.ಸಿ. ಲೇಔಟ್, ಬೆಂಗಳೂರು-560 040

---

ಸಂಖ್ಯೆ: ಸ.ಕಾ.ನಿ.ಅ/ಗಾಳ/ಪಿಆರ್/ /22-23 ದಿನಾಂಕ:-17-09-2022

ವಾರ್ಡ್ ಸಂಖ್ಯೆ : 159 ವಾರ್ಡ್ ಸಭೆಯ ನಡವಳಿ

**ಸಭೆಗೆ ಹಾಜರಾಗಿ ಭಾಗವಹಿಸಿದ ಸದಸ್ಯರು ಮತ್ತು ಸಾರ್ವಜನಿಕರ ವಿವರ:**

| ಕ್ರಮ ಸಂಖ್ಯೆ | ಅಧಿಕಾರಿಗಳು ಮತ್ತು ಸದಸ್ಯರುಗಳ ಹೆಸರು | ಪದನಾಮ/ಅಧ್ಯಕ್ಷರು | ಹಾಜರಾತಿ |
|---|---|---|---|
| 1 | ಶ್ರೀಮತಿ. ಮಾಧುರಿ | ನೋಡೆಲ್ ಅಧಿಕಾರಿ | ಹಾಜರಾಗಿರುತ್ತಾರೆ |
| 2 | ಶ್ರೀ. ರಘುನಾಥ್ .ಕೆ.ಎನ್. | ಕಾರ್ಯದರ್ಶಿ | ಹಾಜರಾಗಿರುತ್ತಾರೆ |
| 3 | ಶ್ರೀ. ಸಂದೀಪ್ | ಕಿ.ಅ (ಗುತ್ತಿಗೆ ಆದಾರದ ಮೇಲೆ) | ಹಾಜರಾಗಿರುತ್ತಾರೆ |
| 4 | ಶ್ರೀಮತಿ.ಕವಿತಾ | ಆರೋಗ್ಯ ಅಧಿಕಾರಿ | ಹಾಜರಾಗಿರುತ್ತಾರೆ |
| 5 | ಶ್ರೀ. ರಾಜಶೇಖರ್ | ಹಿ.ಆರೋಗ್ಯ ಅಧಿಕಾರಿ | ಹಾಜರಾಗಿರುತ್ತಾರೆ |
| 6 | ಶ್ರೀ.ಸ್ವಾಮಿ | ತೋಟಗಾರಿಕೆ | ಹಾಜರಾಗಿರುತ್ತಾರೆ |
| 7 | ಶ್ರೀ.ಚಂದ್ರಶೇಖರ್ | ಬೆಸ್ಕಾಂ (ಕಿ.ಅ) | ಹಾಜರಾಗಿರುತ್ತಾರೆ |

**<u>ಸಭೆಗೆ ಹಾಜರಿದ್ದ ಸಾರ್ವಜನಿಕರು</u>**

1. ಶ್ರೀ. ಜಯರಾಮ್
2. ಶ್ರೀ. ಕೆಂಪಯ್ಯ
3. ಶ್ರೀ. ವೇಣು ಗೋಪಾಲ್
4. ಶ್ರೀ. ಕೃಷ್ಣ
5. ಶ್ರೀ. ವೀರಣ್ಣ
6. ಶ್ರೀ. ರಮೇಶ್

ದಿನಾಂಕ:-17-09-2022 ರಂದು ಮಾನ್ಯ ನೋಡಲ್ ಅಧಿಕಾರಿಗಳು ವಾರ್ಡ್ ಸಂಖ್ಯೆ : 159 ಹಂಪಿನಗರ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ. ಶ್ರೀ. ರಘುನಾಥ್ .ಕೆ.ಎನ್. ಕಾರ್ಯದರ್ಶಿ ರವರು ಹಾಜರಿದ್ದ ಎಲ್ಲಾ ಅಧಿಕಾರಿಗಳು, ಸಿಬ್ಬಂದಿ ವರ್ಗದವರು ಮತ್ತು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೆ ಸ್ವಾಗತವನ್ನು ಕೋರುತ್ತಾ ಸಭೆಯನ್ನು ಪ್ರಾರಂಭಿಸಲಾಯಿತು.

ಈ ಹಿಂದಿನ ಸಭೆಯಲ್ಲಿ ಬಂದಿದ್ದ ದೂರುಗಳ ಮೇಲೆ ಕೈಗೊಂಡಿರುವ ಕ್ರಮಗಳ ಬಗ್ಗೆ ಚರ್ಚಿಸುತ್ತ ಪ್ರಸ್ತುತ ಕುಂದು ಕೊರತೆಗಳ ಬಗ್ಗೆ ಚರ್ಚೆ ಪ್ರಾರಂಭಿಸಲಾಯಿತು.

| ಕ್ರ.ಸಂ | ವಿಷಯ | ತೀರ್ಮಾನ |
|---|---|---|
| 1 | 7ನೇ 'ಎ' ಅಡ್ಡರಸ್ತೆ ಮತ್ತು 7ನೇ ಅಡ್ಡರಸ್ತೆಗಳಲ್ಲಿ ಸ್ಟ್ರೀಟ್ ಲೈಟ್ ಇಲ್ಲವೆಂದು ಶ್ರೀ.ವೀರಣ್ಣ ರವರು ತಿಳಿಸಿದರು. | ಕ್ರಮ : ಈ ವಿಚಾರವಾಗಿ ಕೂಡಲೇ ಕ್ರಮವನ್ನು ಕೈಗೊಳ್ಳುವುದಾಗಿ ನೋಡೆಲ್ ಅಧಿಕಾರಿರವರು ತಿಳಿಸಿದರು. |
| 2 | 5ನೇ ಮುಖ್ಯರಸ್ತೆ, ಟ್ರಾನ್ಸ್‌ಫಾರಂ ಹತ್ತಿರ ಕಸವನ್ನು ತೆಗೆಯುವುದಿಲ್ಲ ಹಾಗೆಯೆ ಇರುತ್ತದೆ ಎಂದು ಶ್ರೀ.ಜಯರಾಂ ರವರು ತಿಳಿಸಿದರು. | ಕ್ರಮ : ಈ ವಿಚಾರವಾಗಿ ಕೂಡಲೇ ಕ್ರಮವನ್ನು ಕೈಗೊಳ್ಳಬೇಕೆಂದು ಹಿ.ಆರೋಗ್ಯ ಪರಿವೀಕ್ಷಕರವರಿಗೆ ನೋಡೆಲ್ ಅಧಿಕಾರಿರವರು ತಿಳಿಸಿದರು. |
| 3 | ಅಂಡರ್ ಪಾಸ್ ಹತ್ತಿರ ವಾಹನಗಳನ್ನು ತೆರವುಗೊಳಿಸಬೇಕೆಂದು ಶ್ರೀ.ಕೃಷ್ಣ ರವರು ತಿಳಿಸಿದರು. | ಕ್ರಮ : ಈ ವಿಚಾರವಾಗಿ ಕೂಡಲೇ ಕ್ರಮವನ್ನು ಕೈಗೊಳ್ಳಲು ಪೋಲೀಸ್ ಅಧಿಕಾರಿರವರಿಗೆ ತಿಳಿಸುವುದಾಗಿ ನೋಡೆಲ್ ಅಧಿಕಾರಿರವರು ತಿಳಿಸಿದರು. |
| 4 | ಸರ್ವಿಸ್ ರಸ್ತೆಯಲ್ಲಿ ಉದ್ಯಾನವನದ ನಿರ್ವಹಣೆ ಮಾಡುತ್ತಿಲ್ಲವೆಂದು ಶ್ರೀ.ಕೃಷ್ಣ ರವರು ತಿಳಿಸಿದರು. | ಕ್ರಮ : ಈ ವಿಚಾರವಾಗಿ ಕೂಡಲೇ ಕ್ರಮವನ್ನು ಕೈಗೊಳ್ಳುವಂತೆ ಸಭೆಯಲ್ಲಿ ಹಾಜರಿದ್ದ ತೋಟಗಾರಿಕೆ ಇಲಾಖೆಯವರಿಗೆ ನೋಡೆಲ್ ಅಧಿಕಾರಿರವರು ತಿಳಿಸಿದರು. |
| 5 | ವಾರ್ಡ್ ವ್ಯಾಪ್ತಿಯಲ್ಲಿ ಶುದ್ಧ ಕುಡಿಯುವ ನೀರಿನ ಘಟಕಕ್ಕೆ ಅನುಮತಿ ನೀಡಬಾರದೆಂದು ಜಿಲ್ಲಾ ಪಂಚಾಯತ್ ರವರಿಗೆ ಪತ್ರ ಬರೆಯುವಂತೆ ಶ್ರೀ.ಕೃಷ್ಣ ರವರು ತಿಳಿಸಿದರು | ಕ್ರಮ : ಈ ವಿಚಾರವಾಗಿ ಕೂಡಲೇ ಕ್ರಮವನ್ನು ಕೈಗೊಳ್ಳಬೇಕೆಂದು ಸಹಾಯಕ ಅಭಿಯಂತರವರಿಗೆ ನೋಡೆಲ್ ಅಧಿಕಾರಿರವರು ತಿಳಿಸಿದರು. |
| 6 | ರಸೆಯ ಬದಿಯಲ್ಲಿ ಬಿದ್ದಿರುವ ಕೇಬಲ್‌ಗಳನ್ನು ತೆರವುಗೊಳಿಸುವಂತೆ ಶ್ರೀ.ವೇಣುಗೋಪಾಲ್ ರವರು ತಿಳಿಸಿದರು | ಕ್ರಮ : ಈ ವಿಚಾರವಾಗಿ ಕೂಡಲೇ ಕ್ರಮವನ್ನು ಕೈಗೊಳ್ಳಬೇಕೆಂದು ಸಹಾಯಕ ಅಭಿಯಂತರವರಿಗೆ ನೋಡೆಲ್ ಅಧಿಕಾರಿರವರು ತಿಳಿಸಿದರು. |
| 7 | ವಾರ್ಡ್ ವ್ಯಾಪ್ತಿಯ ಉದ್ಯಾನವನದಲ್ಲಿ ಸೊಳ್ಳೆ ಔಷಧಿಗಳನ್ನು ಸಿಂಪಡಿಸಬೇಕೆಂದು ಮತ್ತು 5ನೇ ಮುಖ್ಯರಸ್ತೆಯಲ್ಲಿ ಮಣ್ಣನ್ನು ತೆಗೆಯಬೇಕೆಂದು ಶ್ರೀ.ಜಯರಾಮ್ ರವರು ತಿಳಿಸಿದರು. | ಕ್ರಮ : ಈ ವಿಚಾರವಾಗಿ ಕೂಡಲೇ ಕ್ರಮವನ್ನು ಕೈಗೊಳ್ಳುವುದಾಗಿ ನೋಡೆಲ್ ಅಧಿಕಾರಿರವರು ತಿಳಿಸಿದರು. |

ಸಭೆಯನ್ನು ಕಾರ್ಯದರ್ಶಿಗಳಾದ ಶ್ರೀ. ರಘುನಾಥ್ .ಕೆ.ಎನ್. ರವರು ವಂದನಾರ್ಪಣೆಯೊಂದಿಗೆ ಮುಕ್ತಾಯ ಮಾಡಿದರು.

ಕಾರ್ಯದರ್ಶಿ
ವಾರ್ಡ್ ಸಂಖ್ಯೆ : 159 (ಹಂಪಿನಗರ)

**ಪ್ರತಿಯನ್ನು:-**

1. ಮಾನ್ಯ ಆಯುಕ್ತರ ಆಪ್ತ ಸಹಾಯಕರಿಗೆ ಕಳುಹಿಸುತ್ತಾ ಮಾನ್ಯ ಆಯುಕ್ತರ ಗಮನಕ್ಕೆ ತರುವಂತೆ ಕೋರಿದೆ.
2. ವಿಶೇಷ ಆಯುಕ್ತರು ಆಡಳಿತ ರವರ ಅವಗಾಹನೆಗೆ ಸಲ್ಲಿಸಿದೆ.
3. ಜಂಟಿ ಆಯುಕ್ತರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
4. ಅಧ್ಯಕ್ಷರು ಹಾಗೂ ನೋಡೆಲ್ ಅಧಿಕಾರಿಗಳು ರವರ ಅವಗಾಹನೆಗೆ ಸಲ್ಲಿಸಿದೆ.